# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 24.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ. ಟಿ ಎನ್ ಜಿ ರವರಿಂದ

ನೀವು ಏನು ಕೆಲಸ ಮಾಡುತ್ತೀರಿ ಎಂದರೆ ವ್ಯವಸಾಯ ಎಂದು ನುಡಿಯುತ್ತಾರೆ. ವಾದಿಯು ನಿಮ್ಮ ವಿರುದ್ಧ ಯಾವ ರೀತಿ ದಾವಾ ಸಲ್ಲಿಸಿದ್ದಾರೆ ಎಂದು ನೀವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ದಾವಾ ಆಸ್ತಿ ಅವರ ಪಿತ್ರಾರ್ಜಿತ ಆಸ್ತಿಯಾಗಿದೆ ಎಂದು ಹೇಳಿ ಸಾರ್ವಜನಿಕ ರಸ್ತೆಗೆ ದಾವಾ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿಯು ಶೆಡ್ ಅನ್ನು ಕಟ್ಟಿಕೊಂಡು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ವಾದಿಯು ದಾವಾ ಸ್ವತ್ತಿನಲ್ಲಿ ತನ್ನ ತಂದೆಯ ಕಾಲದಿಂದಲೂ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನೀವು ದಾವಾ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿ ಇರುತ್ತೀರಿ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಶಿವಕುಮಾರ್ ರವರು ಇದ್ದಾರೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಬಸವರಾಜು ರವರು ಇದ್ದಾರೆ ಎಂದರೆ ಸರಿಯಲ್ಲ. ಉತ್ತರಕ್ಕೆ ಎ ಬಸವಯ್ಯ ರವರು ಇದ್ದಾರೆ ಎಂದರೆ ಸರಿಯಲ್ಲ. ರಸ್ತೆ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಆಪಾದಿಸಿ ನೀವೇನಾದರೂ ಸಿವಿಲ್ ದಾವೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಸಿವಿಲ್ ದಾವೆ ಸಲ್ಲಿಸಿಲ್ಲ ಅದರೆ ಭೂ ಕಬಳಿಕೆ ನ್ಯಾಯಾಲಯಕ್ಕೆ ಪ್ರಕರಣ ದಾಖಲು ಮಾಡಿದ್ದೇವೆ ಅಲ್ಲಿ ಆದೇಶ ಕೂಡ ಆಗಿದೆ ಎಂದು ನುಡಿಯುತ್ತಾರೆ. ಭೂ ಕಬಳಿಕೆ ನ್ಯಾಯಾಲಯದಲ್ಲಿ ವಾದಿಯ ವಿರುದ್ಧ ತೆರವು ಮಾಡಿ ಎಂದು ಆದೇಶ ಆಗಿದಿಯಾ ಎಂದರೆ ಆಗಿದೆ

ಎಂದು ನುಡಿಯುತ್ತಾರೆ. ಸದರಿ ಅದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಆ ರೀತಿ ಯಾವುದೇ ಆದೇಶ ಆಗಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಪರ ನಿಶಾನೆಯಗಳಾಗಿ ಗುರುತಿಸಿರುವ ದಾಖಲಾತಿಗಳನ್ನು ನೀಡಿ ಇದರಲ್ಲಿ ಯಾವುದು ಸದರಿ ಅದೇಶದ ಪ್ರತಿ ಎಂದರೆ ಸಾಕ್ಷಿಯು ನಿಡಿ.3 ಎಂದು ನುಡಿಯುತ್ತಾರೆ. ನಿಡಿ.3 ರ ಪ್ರಕಾರ ಭೂ ಕಬಳಿಕೆ ನ್ಯಾಯಾಲಯದಲ್ಲಿ ಯಾವುದೇ ಆದೇಶ ಮಾಡದೇ ಪ್ರಕರಣವನ್ನು ಮುಕ್ತಾಯಗೊಳಿಸಿದ್ದಾರೆ ಎಂದರೆ ಸಾಕ್ಷಿಯು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಇರುವವರೆಗೂ ಹಾಗೆಯೇ ಇರಲಿ ಎಂದು ಆದೇಶ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ಯಾವುದೇ ಆದೇಶ ಇಲ್ಲದೇ ಇದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಡಿ.4 ಮತ್ತು 5 ರಲ್ಲಿ ರಸ್ತೆ ಒತ್ತುವರಿಯಾಗಿದೆ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಡಿ.4 ಮತ್ತು 5 ರಲ್ಲಿ ವಾದಿಯು ಅಲ್ಲಿಯೇ ಶೆಡ್ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದು ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ನಿಮಗೆ ಯಾವುದೇ ಹಕ್ಕು, ಅಧಿಕಾರ ಇಲ್ಲದೇ ಇದ್ದರೂ ಕೂಡ ಅಲ್ಲಿ ದಾರಿ ಇದೆ ಎಂದು ಹೇಳಿ ವಾದಿಗೆ ತೊಂದರೆ ನೀಡುತ್ತಿದ್ದೀರಿ ಎಂದರೆ ನಕ್ಷೆಯಲ್ಲಿ ಕಂಡಂತೆ ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ದಕ್ಷಿಣಕ್ಕೆ ದಾರಿ ಇದೆ ಎಂದು ತೋರಿಸಲು ಸರ್ವೆ ನಕ್ಷೆಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ.8 ರ ನಕ್ಷೆಯಲ್ಲಿ ನಿಮ್ಮ ಜಮೀನಿಗೆ ಹೋಗಲು ಯಾವುದೇ ದಾರಿಯನ್ನು ತೋರಿಸಿಲ್ಲ ಎಂದರೆ ದಾರಿ ಇದೆ ಎಂದು ನುಡಿಯುತ್ತಾರೆ. ಹಳೇನಹಳ್ಳಿ ಗ್ರಾಮ ಠಾಣಾದ ನಕ್ಷೆಯನ್ನು ಏನಾದರೂ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಅಲ್ಲಿ ದಾರಿ ಇಲ್ಲದೇ ಇರುವ ಕಾರಣಕ್ಕೆ ನೀವು ಯಾವುದೇ ಗ್ರಾಮ ಠಾಣಾ ನಕ್ಷೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನೀವು ತಹಸೀಲ್ದಾರ್

ರವರಿಗೆ ನೀಡಿರುವ ಅರ್ಜಿಯ ಪ್ರಕಾರ ಯಾವುದೇ ಆದೇಶ ಮಾಡದೇ ಮುಕ್ತಾಯಗೊಳಿಸಿದ್ದಾರೆ ಎಂದರೆ ಸಾಕ್ಷಿಯು ಅವರು ಸಿವಿಲ್ ನ್ಯಾಯಾಲಯದಲ್ಲಿ ತೀರ್ಮಾನವಾಗುವವರೆಗೂ ಹಸ್ತಕ್ಷೇಪ ಮಾಡಬಾರದು ಎಂದು ಮುಕ್ತಾಯಗೊಳಿಸಿದ್ದಾರೆ ಎಂದು ನುಡಿಯುತ್ತಾರೆ. ತಹಸೀಲ್ದಾರ್ ರವರ ಆದೇಶದ ಪ್ರತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ತನ್ನ ಪರ ನಿಶಾನೆಗಳಾಗಿ ಗುರುತಿಸಿರುವ ದಾಖಲಾತಿಗಳನ್ನು ನೀಡಿ ಇದರಲ್ಲಿ ಯಾವುದೇ ತಹಸೀಲ್ದಾರ್ ರವರ ಆದೇಶ ಎಂದರೆ ತಹಸೀಲ್ದಾರ್ ರವರ ಆದೇಶದ ಜೆರಾಕ್ಸ್ ಪ್ರತಿಯನ್ನು ತೋರಿಸಿರುತ್ತಾರೆ ಆದರೆ ಸದರಿ ದಾಖಲಾತಿಯು ಜೆರಾಕ್ಸ್ ಪ್ರತಿಯಾಗಿರುವುದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ಸಿವಿಲ್ ಕೇಸ್ ಇರುತ್ತದೆ ಎಂದು ನಮೂದಿಸಿ ತಹಸೀಲ್ದಾರ್ ರವರು ಆದೇಶ ಮಾಡಿಲ್ಲ ಎಂದರೆ ಸರಿಯಲ್ಲ.

2. ನೀವೇನಾದರೂ ಗ್ರಾಮ ಪಂಚಾಯಿತಿಗೆ ರಸ್ತೆಯನ್ನು ತೆರವುಗೊಳಿಸಿ ಎಂದು ಅರ್ಜಿ ನೀಡಿದ್ದಿರಾ ಎಂದರೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಆ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಿರಾ ಎಂದರೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನೀವು ಆ ರೀತಿ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸದೆ ಇದ್ದರು ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಅಲ್ಲಿ ಯಾವುದೇ ದಾರಿ ಇಲ್ಲದೇ ಇದ್ದರೂ ಕೂಡ ತಹಸೀಲ್ದಾರ್ ರವರಿಗೆ ಪಂಚಾಯಿತಿಗೆ ಸುಳ್ಳು ಅರ್ಜಿಯನ್ನು ನೀಡುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಂದಾಯ ಅಧಿಕಾರಿಗಳು, ತಹಸೀಲ್ದಾರ್ ರವರು, revenue inspector, ಗ್ರಾಮೀಣಾಭಿವೃದ್ಧಿ ಅಧಿಕಾರಿಗಳು, ಸರ್ವೆ ಅಧಿಕಾರಿಗಳು ಸ್ಥಳಕ್ಕೆ ಬಂದು ಜಂಟಿ ಸರ್ವೆ ಮಾಡಿ ರಸ್ತೆ ಎಂದು ದೃಢೀಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ.4 ಮತ್ತು 5 ರಲ್ಲಿ ವಾದಿಯ ಖಾತಾ ನಂಬರ್ ನಮೂದಿಸಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಮತ್ತು ಯಾವುದೇ ರಸ್ತೆಯನ್ನು ವಾದಿಯು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ

ಎಂದರೆ ಸರಿಯಲ್ಲ. ಅವರು ಯಾವುದೇ ರಸ್ತೆಯನ್ನು ಒತ್ತುವರಿ ಮಾಡದೇ ಇರುವುದರಿಂದ ಮತ್ತು ಅಲ್ಲಿ ಯಾವುದೇ ರಸ್ತೆ ಇಲ್ಲದೇ ಇರುವುದರಿಂದ ತಹಸೀಲ್ದಾರ್ ರವರಾಗಲೀ, ಪಂಚಾಯಿತಿ ಅಧಿಕಾರಿಗಳಾಗಲೀ, ಜಿಲ್ಲಾ ಪಂಚಾಯಿತಿ ಅಧಿಕಾರಿಗಳಾಗಲೀ ವಾದಿಯ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ಮಾನ್ಯ ಉಚ್ಚ ನ್ಯಾಯಲಯಕ್ಕೆ writ ಅರ್ಜಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನೀವು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ W.P 10969/2025 ರಲ್ಲಿ ಸಿವಿಲ್ ದಾವಾ ನಡೆಯುತ್ತಿರುವ ಬಗ್ಗೆ ಹೇಳಿದ್ದಿರಾ ಎಂದರೆ ಹೇಳಿದ್ದೇನೆ ಎಂದು ನುಡಿಯುತ್ತಾರೆ. ಸದರಿ writ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ದಾರಿ ಇದೆ ಎಂದು ಹೇಳಿ ವಾದಿಯ ಸ್ವಾಧೀನಕ್ಕೆ ತೊಂದರೆ ನೀಡಿದ್ದರಿಂದ ವಾದಿಯು ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು ನೀಡಲಾಯಿತು.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.